ಅಧ್ಯಕ್ಷರು.—ನಿಯಮ ೩೩೪ರ ಕೆಳಗೆ ಹೆಚ್ಚಿನ ಚರ್ಚೆಗೆ ಅವಕಾಶ ಇರುವುದಿಲ್ಲ ಎಂದು ಹೇಳಿದ್ದೇನೆ. ಮಾನ್ಯ ವಿನಯಕುಮಾರ್ ಸೊರಕೆಯವರು ಬೇಕಾದರೆ ನಾಳೆ ಇನ್ನೊಂದು ೩೩೪ರ ಕೆಳಗೆ ಕೊಡಬಹುದು. ಈಗ ಎಲ್ಲರೂ ಕುಳಿತುಕೊಳ್ಳಬೇಕು. ಯಾರೂ ಬೇರೆಯವರು ಮಾತನಾಡಿದುದು ರೆಕಾರ್ಡ್‌ಗೆ ಹೋಗುವುದಿಲ್ಲ...

ಶ್ರೀ ಕೆ. ವಸಂತ ಬಂಗೇರ.—ಈ ವಿಷಯವನ್ನು ನಾನು ಕೇಳಿದುದು. ನನಗೆ ಸರಿಯಾದ ಉತ್ತರ ಬೇಕು...

ಅಧ್ಯಕ್ಷರು.—ತಾವು ಕುಳಿತುಕೊಳ್ಳಬೇಕು. ಮುಂದಿನ ನಿಯಮ ೩೩೪ರ ಪ್ರಕಾರ ಮನೋರಮ ಮಧ್ವರಾಜ್‌ರವರು ಓದಬಹುದು.

೯. ರಾಜ್ಯದಲ್ಲಿ ಅನಾಥಾಶ್ರಮಗಳಿಂದ ಹೊರಬಂದವರಿಗೆ ಸರ್ಕಾರದಲ್ಲಿ ಹುದ್ದೆಗಳ ಮೀಸಲಾತಿಯ ಬಗ್ಗೆ.

ಶ್ರೀಮತಿ ಮನೋರಮ ಮಧ್ವರಾಜ್ (ಉಡುಪಿ).—"ರಾಜ್ಯದಲ್ಲಿ ಅನೇಕ ಅನಾಥಾಶ್ರಮಗಳನ್ನು, ಧಾರ್ಮಿಕ ಸಂಸ್ಥೆಗಳು ಹಾಗೂ ಸಾಮಾಜಿಕ ಸಂಸ್ಥೆಗಳು ನಡೆಸುತ್ತಿದ್ದು, ಅಲ್ಲಿನ ಅನಾಥ ಮಕ್ಕಳು ಯಾವ ಜಾತಿ ಅಥವಾ ಮತಕ್ಕೆ ಸೇರಿರುವುದಿಲ್ಲ. ಅಲ್ಲದೆ ಅವರಿಗೆ ಯಾವುದೇ ವಿಧವಾದ ಅಂತಸ್ತು (ಸ್ಟೇಟಸ್) ಇರುವುದಿಲ್ಲ. ಈ ಸಂಸ್ಥೆಗಳಿಂದ ಹೊರ ಬರತಕ್ಕ ಅವರಿಗೆ ನೆಲೆಯಾಗಲೀ, ಜೀವನಾಧಾರವಾಗಲೀ ಇಲ್ಲದಿದ್ದು, ಅವರು ನೀರಿನಿಂದ ಹೊರ ಬಂದ ಮೀನಿನಂತಾಗುತ್ತಾರೆ. ಇಂತಹ ಅನಾಥರಿಗಾಗಿ ಮಹಾರಾಷ್ಟ್ರದ ರಾಜ್ಯ ಸರಕಾರದಲ್ಲಿ ನೌಕರಿ ಪಡೆದು ಕೊಳ್ಳುವ ಸಲುವಾಗಿ ಕೆಲವು ಹುದ್ದೆಗಳನ್ನು ಮೀಸಲಾಗಿಡಲಾಗಿದೆ ಇವರು ದೇಶದ ಮುಂದಿನ ಪ್ರಜೆಗಳಾಗಿರುವುದರಿಂದ ಅವರಿಗೆ ನೌಕರಿ ಒದಗಿಸುವುದಲ್ಲದೆ ನೆಲೆಯನ್ನೂ ಒದಗಿಸುವುದು ಸರಕಾರದವರ ಆದ್ಯಕರ್ತವ್ಯವಾಗಿದೆ. ಮಂಗಳೂರಿನ ಸ್ವಾಮಿ ಶ್ರದ್ಧಾನಂದ ಸೇವಾಶ್ರಮವೂ ಸಹ ಇಂತಹ ಅನಾಥ ಮಕ್ಕಳ ಸಂಸ್ಥೆಯಾಗಿದ್ದು ಅಲ್ಲಿಂದ ಹೊರಬಂದ ಅನೇಕರು ಇಡೀ ದೇಶದಲ್ಲಿ ದೇಶದ ಸೇವೆ ಮಾಡುತ್ತಿರುವುದಲ್ಲದೆ ಪರದೇಶಗಳಲ್ಲಿಯೂ ಸೇವೆ ಸಲ್ಲಿಸುತ್ತಿದ್ದಾರೆ. ಆದ್ದರಿಂದ ಇಂತಹ ಸಂಸ್ಥೆಗಳಿಂದ ಬರತಕ್ಕ ಯುವಕ ಯುವತಿಯರಿಗಾಗಿ ಸರಕಾರದ ಹುದ್ದೆಗಳಲ್ಲಿ ಹಾಗೂ ಅರೆ ಸರಕಾರಿ ಉದ್ದಿಮೆಗಳಲ್ಲಿ ಹುದ್ದೆಗಳನ್ನು ಮೀಸಲಿಡುವ ಮೂಲಕ ಅನಾಥ ಮಕ್ಕಳ ಕಲ್ಯಾಣ ಮಾಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳ ಪರವಾಗಿ).—ಅಧ್ಯಕ್ಷರೇ, ಈ ವಿಚಾರವಾಗಿ ಸದರಿ ಶ್ರದ್ಧಾನಂದ ಆಶ್ರಮದವರು ಮತ್ತು ಸನ್ಮಾನ್ಯ ಸದಸ್ಯೆಯವರು ಸಂಬಂಧಪಟ್ಟ ಮಾನ್ಯ ಮಂತ್ರಿಯವರಿಗೆ ಈಗಾಗಲೇ ಮನವಿಯನ್ನು ಕಳುಹಿಸಿದ್ದಾರೆ. ಈಗ ಇಲ್ಲಿ ನಾನು ಮಂತ್ರಿಗಳ ಪರವಾಗಿ ನೇರವಾಗಿ ಉತ್ತರವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಮಾನ್ಯ ಮಂತ್ರಿಗಳ ಗಮನಕ್ಕೆ ವಿಷಯವನ್ನು ತಂದು, ಉತ್ತರವನ್ನು ತರಿಸಿಕೊಡುತ್ತೇನೆ.

೧೦. ಬೈಂದೂರಿನ ಸರ್ಕಾರಿ ಪ್ರಾಥಮಿಕ ದರ್ಜೆ ಕಾಲೇಜಿನ ಕಟ್ಟಡವನ್ನು ಕೂಡಲೇ ಪ್ರಾರಂಭಿಸುವುದು.

ಶ್ರೀ ಜಿ. ಎಸ್ ಆಚಾರ್.—"ದಕ್ಷಿಣ ಕನ್ನಡ ಜಿಲ್ಲೆಯ ಬೈಂದೂರಿನಲ್ಲಿ ಪ್ರಥಮ ದರ್ಜೆಯ ಸರಕಾರಿ ಕಾಲೇಜು. ಸರಕಾರಿ ಪದವಿಪೂರ್ವ ಕಾಲೇಜಿನಲ್ಲಿ ನಡೆಯುತ್ತಿದೆ. ಅನೇಕ ವರ್ಷಗಳಿಂದ ಈ ಪರಿಸ್ಥಿತಿ ಇದ್ದು, ಉಭಯ ಸಂಸ್ಥೆಗಳಿಗೂ ಇದರಿಂದ ತೊಂದರೆಯಾಗಿದೆ. ಸರಕಾರಿ ಪ್ರಥಮ ದರ್ಜೆ ಕಾಲೇಜಿಗೆ ಕಟ್ಟಡ ಕಟ್ಟಿಸಲು ಸರಕಾರವನ್ನು ಒತ್ತಾಯಿಸಿದಾಗ, ೧೯೮೬-೮೭ರಲ್ಲಿ ಕಟ್ಟಿಸಲು ಸೂಕ್ತ ಕ್ರಮಕೈಕೊಳ್ಳುವುದಾಗಿ ಮಾನ್ಯ ಉನ್ನತ ಶಿಕ್ಷಣ ಸಚಿವರು ಆಶ್ವಾಸನೆ ನೀಡಿದ್ದರು. ಆಯವ್ಯಯ ಪಟ್ಟಿಯಲ್ಲಿ ಸಹಾ ಹಣ ಕಾದಿರಿಸಲಾಯಿತು. ಶಂಕುಸ್ಥಾಪನೆಗೆ ದಿನ ಕೂಡ ನಿಗದಿ ಪಡಿಸಲಾಯಿತು. ಆದರೆ ಸಮಾರಂಭ ಮುಂದೂಡಲ್ಪಟ್ಟಿತು. ಕಟ್ಟಡದ ಕೆಲಸ ಇನ್ನೂ ಪ್ರಾರಂಭವಾಗಿಲ್ಲ. ಎರಡೂ ವಿದ್ಯಾಸಂಸ್ಥೆಗಳಲ್ಲಿ ತೊಂದರೆ ಮುಂದುವರಿಯುತ್ತಲೇ ಇದೆ. ಬೈಂದೂರ ಪ್ರಥಮ ದರ್ಜೆ ಸರಕಾರಿ ಕಾಲೇಜಿನ ಕಟ್ಟಡ ರಚನಾ ಕಾರ್ಯ ಕೂಡಲೇ ಪ್ರಾರಂಭಿಸಬೇಕೆಂದು ಮರಳಿ ನಾನು ಒತ್ತಾಯಿಸುತ್ತೇನೆ.

ಶ್ರೀ ಜೀವರಾಜ್ ಆಳ್ವ.—ಮಾನ್ಯ ಅಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆ ಬೈಂದೂರು ಸರಕಾರಿ ಪ್ರಥಮ ದರ್ಜೆ ಕಾಲೇಜು ನಿರ್ಮಿಸಲು ೧೯೮೬-೮೮ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ೨.೫ ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಈಗ ಅಸ್ತಿತ್ವದಲ್ಲಿರುವ ಸರಕಾರಿ ಮಿತವ್ಯಯ ಆದೇಶ ಹಿಂತೆಗೆದುಕೊಂಡ ನಂತರ ಮತ್ತು ಸದರಿ ಕಾಲೇಜಿನ ನಕ್ಷೆ ಅಂದಾಜನ್ನು ಮುಖ್ಯ ಅಭಿಯಂತರರಿಂದ ಸ್ವೀಕರಿಸಿದ ನಂತರ ಆಡಳಿತ ಅನುಮೋದನೆ ನೀಡಿ ಸದರಿ ಕಾಲೇಜು ಕಟ್ಟಡ ನಿರ್ಮಿಸಲು ಮುಂದಿನ ಅಗತ್ಯ ಕ್ರಮ ತೆಗೆದುಕೊಳ್ಳಲು ಕಾಲೇಜು ಶಿಕ್ಷಣ ನಿರ್ದೇಶಕರನ್ನು ಕೋರಲಾಗುವುದು.

೧೧. ಬೆಳಗಾವಿಯ ಮಾರ್ಕಂಡೇಯ ಸಕ್ಕರೆ ಕಾರ್ಖಾನೆ ಸ್ಥಾಪನೆಗೆ ವಿರೋಧ ವ್ಯಕ್ತವಾಗಿರುವುದು.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ) —ಬೆಳಗಾವಿ ಜಿಲ್ಲೆಯ ಮಾರ್ಕಂಡೇಯ ಸಕ್ಕರೆ ಕಾರ್ಖಾನೆಯನ್ನು ವಿರೋಧಿಸಿ ಬೆಳಗಾವಿ ಜಿಲ್ಲೆಯ ಪ್ರತಿನಿಧಿಗಳು ಬೆಂಗಳೂರಿಗೆ ಬಂದು ಸರಕಾರದ ಗಮನವನ್ನು ಸೆಳೆದಿದ್ದು ಈ ಸಕ್ಕರೆ ಕಾರ್ಖಾನೆ ಸ್ಥಾಪನೆಗೆ ಸರಕಾರ ಮಾನ್ಯತೆ ನೀಡಬಾರದೆಂದು ಒತ್ತಾಯಿಸುತ್ತಿದ್ದಾರೆ. ರಾಜ್ಯದಲ್ಲಿ ಹಾಗೂ ಮುಖ್ಯವಾಗಿ ಬೆಳಗಾವಿ ಜಿಲ್ಲೆಯಲ್ಲಿ ಈಗಾಗಲೇ ಇರುವ ಸಕ್ಕರೆ ಕಾರ್ಖಾನೆಗಳ ಕಾರ್ಯಾಚರಣೆ ಸರಿಯಾಗಿ ಇಲ್ಲದೇ ಇರುವುದರಿಂದ ಸಕ್ಕರೆ ಕಾರ್ಖಾನೆಗಳ ಆರ್ಥಿಕ ಮಟ್ಟ ಕುಗ್ಗಿದ್ದು ಈಗ ಕಾರ್ಖಾನೆಗಳ ಸುವ್ಯವಸ್ಥೆಗಾಗಿ ಪ್ರಯತ್ನ ಮಾಡಬೇಕು.

ಕಾರ್ಖಾನೆಗಳ ಆಡಳಿತ ಮಂಡಲಿ ಷಟ್ಪದ ಹಿತಾಸಕ್ತಿಗಳ ಕೈವಾಡದಲ್ಲಿದ್ದು ಕಬ್ಬು ಬೆಳೆಗಾರರ ಹಿತಾಸಕ್ತಿಗಳನ್ನು ಕಡೆಗಣಿಸಿ ತಮ್ಮದೇ ಆದ ಅಸ್ತಿಯನ್ನು ಮಾಡಿಕೊಳ್ಳುವುದರಲ್ಲಿ ತಲ್ಲೀನರಾಗಿರುತ್ತಾರೆ. ಮಾರ್ಕಂಡೇಯ ಸಕ್ಕರೆ ಕಾರ್ಖಾನೆ ಸ್ಥಾಪನೆ ಮಾಡುವುದರಿಂದ ಕಬ್ಬು ಬೆಳೆಗಾರರಿಗೆ ಯಾವುದೇ ಪ್ರಯೋಜನವಾಗುವುದಿಲ್ಲ. ಈಗಾಗಲೇ ಕಾರ್ಯಾಚರಣೆಯಲ್ಲಿರುವ ಸಕ್ಕರೆ ಕಾರ್ಖಾನೆಗಳ ಸಾಮರ್ಥ್ಯವನ್ನು ಹೆಚ್ಚಿಸಿ ಸರಕಾರದ ತಜ್ಞರ ಸಮಿತಿಯನ್ನು ಆಗುಹೋಗುಗಳ ಬಗ್ಗೆ ತನಿಖೆ ಮಾಡಲು ಕಳುಹಿಸಿ ದಿನನಿತ್ಯದ ವ್ಯವಹಾರವನ್ನು ಹಿಡಿತದಲ್ಲಿಡಲು ಯೋಗ್ಯ ಕ್ರಮ ಕೈಗೊಳ್ಳಬೇಕು. ಮಾರ್ಕಂಡೇಯ ಸಕ್ಕರೆ ಕಾರ್ಖಾನೆ ರಾಜ್ಯದ ಹಿತವನ್ನು ಕಾಪಾಡುವುದರಲ್ಲಿ ಯೋಗ್ಯವಲ್ಲವೆಂದು ಜಿಲ್ಲೆಯ ರಾಜ್ಯ ಅಭಿಪ್ರಾಯಿಗಳ ಸಂಘದ ಅನಿಸಿಕೆ ಇದ್ದು ಮಾನ್ಯ ಮುಖ್ಯ ಮಂತ್ರಿಗಳು ಇದಕ್ಕೆ ಒಪ್ಪಿಗೆ ಕೊಡಬಾರದೆಂದು ಒತ್ತಾಯಿಸುತ್ತಾ ಈ ಬಗ್ಗೆ ಸಹಕಾರ ಕೈಗಾರಿಕಾ ಮಂತ್ರಿಗಳ ಹೇಳಿಕೆಯನ್ನು ಸದನದಲ್ಲಿ ಬಯಸುತ್ತೇನೆ,

SRI R.B. POTDAR (Minister for Industrial Co-operatives).—Sir, there are six Sugar Factories in Co-operative Sector and one Sugar Factory in Private Sector in Belgaum District. Two more factories in Co-operative Sector have been recommended. Thus, there will be nine Sugar Factories in the Districts. In addition to this, some portion of the villages of Gokak Taluk growing sugarcane have been allotted to a private sugar factory situated at Sameerwadi in Bijapur District.

This year, Department of Agriculture has estimated that the total production of sugarcane in Belgaum District will be about 45 lakhs MTs. There is further potentiality to grow more sugarcane in the District as sugarcane growing has become attractive due to its remunerative price and easy marketing. Taking into account the crushing capacity of the factories, it is expected that nearly 10 to 15 lakhs Mts of sugarcane will be in excess. This excess sugarcane is to be transported to nearby sugar factories situated in Maharashtra State. It is our experience that permission to transport sugarcane to Maharashtra has created several administrative problems resulting